# ಪೋಗದಿರೆಲೋ ರಂಗ ಬಾಗಿಲಿಂದಾಚೆಗೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 380.
2. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 144.
3. **Ref.:** Shri Purandara Dasara Sahitya Part – 4, Krishna Leela, edited by Shri Betageri Krishna Sharma and Shri Bengeri Huchha Rayaru, page No. 51.
4. **Ref.:** Lyrics mentioned without highlights are as per Ref. 1. The wordings in Ref. 2 are similar to Ref. 1. The wordings in Ref. 3 are slightly different and these differences are given in yellow highlights.
5. **Note:** Singer has followed lyrics as in Ref. 1.

ರಾಗ: ಶಂಕರಾಭರಣ ತಾಳ: ಅಟ

ಪೋಗದಿರೆಲೋ ರಂಗ ಬಾಗಿಲಿಂದಾಚೆಗೆ
ಭಾಗವತರು ಕಂಡರೆತ್ತಿಕೊಂಡೊಯ್ವರೊ ॥ ಪ ॥

ಸುರ ಮುನಿಗಳು ತಮ್ಮ ಹೃದಯ ಗಹ್ವರದಲ್ಲಿ
(ಪರಮಾತ್ಮನ ಕಾಣದರಸುವರೊ) (ಪರಮಾತ್ಮ ನಿನ್ನ ಕಾಣದರಸುವರೊ)
ದೊರಕದ (ವಸ್ತುವಿಂದು) (ವಸ್ತುವು) ದೊರಕಿತು ತಮಗೆಂದು
ಹರುಷದಿಂದಲಿ ನಿನ್ನ ಕರೆದೆತ್ತಿಕೊಂಬರೊ ॥ 1 ॥

ಅಗಣಿತ ಗುಣ ನಿನ್ನ ಜಗದ ನಾರಿಯರೆಲ್ಲ
(ಹಗೆಯಾಗಿ ನುಡಿವರೊ ಗೋಪಾಲನೆ) (ಹಗರಣ ಮಾಳ್ಪರೊ ಗೋಪಾಲನೆ)
ಮಗುಗಳ ಮಾಣಿಕ್ಯ ತಗಲಿತು ಕರಕೆಂದು
(ಬೇಗದಿಂದಲಿ ಬಂದು ಬಿಗಿದಪ್ಪಿಕೊಂಬರೊ) ॥ 2 ॥ (ಮಿಗಿಲು ವೇಗದಿ ಬಂದು ಬಿಗಿದಪ್ಪಿಕೊಂಬರೊ)

ದಿಟ್ಟ (ನಾರಿಯರೆಲ್ಲ) (ನಾರಿಯರು) ಇಷ್ಟವ ಸಲಿಸೆಂದು
ಅಟ್ಟಟ್ಟಿ (ಬೆನ್ನಿಂದೆ) (ಬೆಂಬತ್ತಿ) ತಿರುಗುವರೊ

ಸೃಷ್ಟೀಶ ಪುರಂದರ ವಿಟ್ಠಲರಾಯನೆ
ಇಷ್ಟಿಷ್ಟು ಬೆಣ್ಣೆಯ ಕೊಟ್ಟೇನೊ ರಂಗಯ್ಯ     ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ದಾಸರು ತಾಯಿಯಾಗಿ ಶ್ರೀ ಕೃಷ್ಣನನ್ನು ಹೃದಯ ಮಂದಿರವನ್ನು ಬಿಟ್ಟು ಹೋಗಬೇಡವೆಂದು ಹೇಳಿದ ಮಾತುಗಳು ಈ ಹಾಡಿನಲ್ಲಿವೆ.

**ಸುರ ಮುನಿಗಳು** – ದೇವತೆಗಳೂ ಮುನಿಗಳೂ.

**ಹೃದಯ ಗಹ್ವರದಲ್ಲಿ** – ಹೃದಯದ ಗುಹೆಯಲ್ಲಿ (ದಹರಾಕಾಶದಲ್ಲಿ).

**ಅಗಣಿತ ಗುಣ** – ಲೆಕ್ಕ ಮಾಡಲಿಕ್ಕೆ ಬಾರದಷ್ಟು ಕಲ್ಯಾಣಗುಣಗಳುಳ್ಳ,

**ತಗುಲಿತು ಕರಕೆಂದು** – ಕೈಗೆ ಸಿಕ್ಕಿತೆಂದು.

**ಧಿಟ್ಟ** – ಧೃಷ್ಟ; ಗಟ್ಟಿಗರಾದ.

**Classification:** Keerthane
**Ankita:** purandara vittala
**Location:** NA
**Category:** Krishna Leele, Navaratna Malike
**Sub-Category:** ranga, Krishna, bagilu, bhagavata, sura, muni, hrudaya, Gopala, paramatma, santosha, hengasu, benne, loka, koosu,
**Pravachana:** NA
**Explanation:** NA